ಹಿರಿಯ ಕಲಾವಿದರ ಜತೆಗೆ ನುಡಿಸುವಾಗ ಹಲವು ಅಂಶಗಳನ್ನು ಗಮನಿಸಬೇಕಾಗುತ್ತದೆ. 'ಸೆನ್ಸ್ ಆಫ್ ರೆಸ್ಪಾನ್ಸಿಬಿಲಿಟಿ' ಬಹಳ ಅಗತ್ಯ. ಕಲಾವಿದರ ಗಾಯನ ಅಥವಾ ವಾದನವನ್ನು ಬಹಳ ಸೂಕ್ಷ್ಮವಾಗಿ ಗಮನಿಸಬೇಕು. ಅವರ ಜೊತೆ ನುಡಿಸುವಾಗ ಎಲ್ಲಿ ಅವರಿಗೆ ಖುಷಿ ಆಗುತ್ತೆ, ಎಲ್ಲಿ ನಮ್ಮಿಂದ ತಪ್ಪಾಗುತ್ತೆ ಎಲ್ಲವನ್ನೂ ಕೂಲಂಕಷವಾಗಿ ವಿಶ್ಲೇಷಣೆ ಮಾಡಬೇಕಾಗುತ್ತದೆ. ಒಬ್ಬ ಕಲಾವಿದ ಕಲಿಕೆಯ ಹಲವು ಹಂತಗಳನ್ನು ಪಾಸಾಗಿ ಬಂದ ಮೇಲೆ ಆತನಲ್ಲಿ ಒಂದು ತುಡಿತ ಇರುತ್ತದೆ. ಇಷ್ಟು ಕಲಿತ ಮೇಲೆ ಬರೀ ಠೇಕಾ ನುಡಿಸಬೇಕಾ ಎಂಬ ಭಾವನೆ ಬಂದು ಆತ ಅಗ್ರೆಸಿವ್ ಆಗ್ತಾನೆ. ಆದರೆ ತಬಲಾ ನುಡಿಸಾಣಿಕೆಗೆ ಬಹಳ ತಾಳ್ಮೆ ಬೇಕು. ಆಗ ಕಲಾವಿದ ಮೇಲೇರಲು ಸಾಧ್ಯ. ಓವರ್‌ಪೋಸ್ ಯಾವತ್ತಿಗೂ ಒಳ್ಳೆಯದಲ್ಲ.

**◆ ದೇಶದ ಎಲ್ಲ ಸಂಗೀತ ದಿಗ್ಗಜರಿಗೆ ಗಾಯಕರು–ವಾದಕರಿಗೆ ಸಮರ್ಥವಾದ ಸಾಥಿ ನೀಡಿದ ಹೆಗ್ಗಳಿಕೆ ನಿಮ್ಮದು. ಅಂತರರಾಷ್ಟ್ರೀಯ ಕಲಾವಿದರ ಜೊತೆಗೆ ನಿಮ್ಮ ಒಡನಾಟವನ್ನು ತಿಳಿಸಿ.**

ಎಲ್ಲ ಹಿರಿಯ ವಿದ್ವಾಂಸರ ಕಛೇರಿಗಳಲ್ಲಿ ತಬಲಾ ನುಡಿಸಿದ್ದೇನೆ. ಪಂ. ಭೀಮಸೇನ ಜೋಶಿ, ಪಂ. ಮಲ್ಲಿಕಾರ್ಜುನ ಮನ್ಸೂರ್, ಬಸವರಾಜ ರಾಜಗುರು, ಗಂಗೂಬಾಯಿ ಹಾನಗಲ್, ಪಂ. ಹರಿಪ್ರಸಾದ್ ಚೌರಾಸಿಯ, ಪಂ. ರವಿಶಂಕರ್, ಪಂ. ವಿಶ್ವಮೋಹನ ಭಟ್, ಪಂ. ಜಸ್‌ರಾಜ್, ಕಿಶೋರಿ ಅಮೋನಿಕರ್, ಪಂ. ರಾಜನ್–ಸಾಜನ್ ಮಿಶ್ರಾ, ಪಂ. ರಾಜೀವ್ ತಾರಾನಾಥ್, ಗಿರಿಜಾ ದೇವಿ... ಹೀಗೆ ಪಟ್ಟಿ ದೊಡ್ಡದಿದೆ. ಎಲ್ಲಕ್ಕಿಂತ ಖುಷಿಕೊಟ್ಟ ವಿಚಾರ ಎಂದ್ರೆ ನಾನು ಯಾರನ್ನ ದೇವರು ಎಂದು ನೋಡಿದ್ದೇನೋ, ಅವರು ಬರ್ತಾರೆ ಅಂದ್ರೆ ಮೈಯೆಲ್ಲ ಕಣ್ಣಾಗಿ ನೋಡ್ತಾ ಇದ್ದೆನೋ ಅವರ ಜತೆಗೇ ಖಾಯಂ ಆಗಿ ತಬಲಾ ನುಡಿಸುವ ಸುಯೋಗ ನನ್ನ ಜೀವನದಲ್ಲಿ ಒದಗಿ ಬಂದದ್ದು. ಪಂ. ಭೀಮಸೇನ ಜೋಶಿ ಅವರ ಜೊತೆ ನುಡಿಸಿದೆ. ಅವರ ಪ್ರೀತಿ ಸಿಕ್ತು, ಗಂಗೂಬಾಯಿ ಹಾನಗಲ್ ಅವರಿಂದ ವಾತ್ಸಲ್ಯ, ಮಮತೆ ಎಲ್ಲ ಸಿಕ್ತು, ಅವರ ಮನೆಯೊಳಗೆ ಬೆಳೆದೋನು ನಾನು. ಬಸವರಾಜ ರಾಜಗುರು ಪ್ರೀತಿಸಿದ್ರು, ಮಲ್ಲಿಕಾರ್ಜುನ ಮನ್ಸೂರ್ ಬೆನ್ನು ಚಪ್ಪರಿಸಿದ್ರು. ಇವೆಲ್ಲ ಬಹಳ ಸಂತೋಷ ಕೊಟ್ಟಿದೆ. ಇಂಥ ಅವಕಾಶ ಎಲ್ಲರಿಗೂ ಸಿಗಲ್ಲ. ಇದು ನನ್ನ ಯೋಗಾಯೋಗ.



ಕೊಳಲು ಮಾಂತ್ರಿಕ ಚೌರಾಸಿಯ ಅವರೊಂದಿಗೆ ರವೀಂದ್ರ ಯಾವಗಲ್

**◆ 'ಶ್ರೀರಾಮ ಕಲಾ ವೇದಿಕೆ' ಕಟ್ಟಿ ಹಲವು ಉಪಯುಕ್ತ ಸಂಗೀತ ಕಾರ್ಯಕ್ರಮ ಹಮ್ಮಿಕೊಳ್ಳುತ್ತಾ, ವಿದ್ವಾಂಸರನ್ನು ಗೌರವಿಸುತ್ತಾ, ಕಿರಿಯ, ಉದಯೋನ್ಮುಖ ಪ್ರತಿಭೆಗಳಿಗೆ ವೇದಿಕೆಯಲ್ಲಿ ಅವಕಾಶ ಕೊಡುತ್ತಾ ಬಂದಿದ್ದೀರಿ. ವೇದಿಕೆಯ ಚಟುವಟಿಕೆಗಳ ಬಗ್ಗೆ ತಿಳಿಸಿ.**

ಶಿಷ್ಯರ, ಜನರ, ಕಲಾವಿದರ ಒತ್ತಾಸೆಗಾಗಿ ಶ್ರೀರಾಮ ಕಲಾವೇದಿಕೆ ಆರಂಭಿಸಿದೆ. ನಮ್ಮ ತಂದೆಗೆ ಕಲೆಯ ಬಗ್ಗೆ ಕಾಳಜಿ ಇತ್ತು. ನಾನು ಕಲೆಯಲ್ಲಿ ಯಶ ಸಾಧಿಸಿದ್ದನ್ನು ಅವರಿಗೆ ನೋಡಲಾಗಲಿಲ್ಲ. ಮಕ್ಕಳಿಗಾಗಿ ತಂದೆ ತಾಯಿಯರು ಎಷ್ಟು ಕಷ್ಟಪಡುತ್ತಾರೆ. ಅದಕ್ಕೆ ಅವರ ಹೆಸರಿನಲ್ಲಿ ಕಾರ್ಯಕ್ರಮ ಮಾಡಿ ಅವರಿಗೆ ಗೌರವ ಸಲ್ಲಿಸುವ ನಿಟ್ಟಿನಲ್ಲಿ ಈ ಕಲಾ ವೇದಿಕೆ ಆರಂಭಿಸಿದ್ದು. ಪ್ರತಿವರ್ಷ ಸಾಧಕರನ್ನು ಗುರುತಿಸಿ 'ಕಲಾ ಶೃಂಗ' ಪ್ರಶಸ್ತಿ ಕೊಡ್ತೀವಿ. ಚೈಲ್ಡ್ ಪ್ರಾಡಿಜಿ, ಉದಯೋನ್ಮುಖ ಹಾಗೂ ಹಿರಿಯ ಕಲಾವಿದರಿಗೆ ವೇದಿಕೆ ಒದಗಿಸ್ತೀವಿ. ಬಡ ಉದಯೋನ್ಮುಖ ಕಲಾವಿದರಿಗೆ ವಿದ್ಯಾರ್ಥಿವೇತನ ಕೊಡ್ತೀವಿ. ಈಗ ಬೆಂಗಳೂರಿನ ದರ್ಶನ್ ಶಂಕರ್ ಹಾಗೂ ದಾವಣಗೆರೆಯ ಉಮಾಶಂಕರ್ ಎಂಬುವರು ದತ್ತಿನಿಧಿಗೆ ಹಣ ಕೊಟ್ಟಿದ್ದಾರೆ. ಹೀಗಾಗಿ ಸ್ಕಾಲರ್‌ಶಿಪ್ ಮೊತ್ತ ಹೆಚ್ಚಿಸಿದ್ದೇವೆ.

**◆ ಸಂಗೀತ ಕೇಳ್ಮೆಯಿಂದಲೂ ಜ್ಞಾನ ಹೆಚ್ಚುತ್ತೆ. ನಿಮ್ಮ ಅಭಿಪ್ರಾಯ ಏನು?**

ಖಂಡಿತಾ. ಸಂಗೀತ ಕಲಿಯುವಷ್ಟೇ ಕೇಳ್ಮೆಯ ಬಗೆಗೂ ಆಸಕ್ತಿ, ತುಡಿತ, ಚಿಂತನೆ ಇರಬೇಕು. ಜ್ಞಾನ ಹೆಚ್ಚಿಸಲು ತುಂಬ ಸಂಗೀತ ಕೇಳಬೇಕು. ಸಾಧನೆ–ಚಿಂತನೆ ನಿರಂತರವಾಗಿರಬೇಕು. ಆಗ ರಾಗಗಳ ಚೆಲುವು, ತಾಳದ ಆಳಗಲ, ಜ್ಞಾನದ ವಿಸ್ತಾರ ಸಾಧ್ಯ. ಸಂಗೀತ ಕಲಿಯುವ ಮಕ್ಕಳಂತೂ ಹಿರಿಯ ಕಲಾವಿದರ ಸಂಗೀತವನ್ನು ನಿರಂತರ ಕೇಳುತ್ತಾ, ಅಲ್ಲಿರುವ ಲಯಕಾರಿ ಅಂಶಗಳನ್ನು ಗುರುತಿಸಿ ಕಲಿಕೆಯಲ್ಲಿ ಅಳವಡಿಸಿಕೊಳ್ಳಬೇಕು. ಆಗ ಒಬ್ಬ ಉತ್ತಮ ಕಲಾವಿದನಾಗಿ ರೂಪುಗೊಳ್ಳಲು ಸಾಧ್ಯ.

**◆ ಸಂಗೀತದ ಅಕಡೆಮಿಕ್ ಅಧ್ಯಯನದಿಂದ ಉತ್ತಮ ಕಲಾವಿದರು ರೂಪುಗೊಳ್ಳಲು ಸಾಧ್ಯವೇ?**

ಸಂಗೀತ ವಿದ್ವಾಂಸ ಪಂ. ಮಲ್ಲಿಕಾರ್ಜುನ ಮನ್ಸೂರ ಅವರು 'ಧಾರವಾಡ ವಿಶ್ವವಿದ್ಯಾಲಯದಲ್ಲಿ ಸಂಗೀತವನ್ನು ಅಕಡೆಮಿಕ್ ಆಗಿ ಅಧ್ಯಯನ ಮಾಡಿದರೆ ಉತ್ತಮ ಕಲಾವಿದರು ರೂಪುಗೊಳ್ಳಬಹುದು, ಅವರ ಜೀವನೋಪಾಯಕ್ಕೂ ಹಾದಿಯಾದೀತು' ಎಂಬ ದೂರದೃಷ್ಟಿ ಹೊಂದಿದ್ದರು. ಆದರೆ ಈಗ ಧಾರವಾಡ, ಮೈಸೂರು ಸಂಗೀತ ವಿವಿಗಳಲ್ಲಿ ಡಾಕ್ಟರೇಟ್, ಚಿನ್ನದ ಪದಕ ಪಡೆಯುವುದಕ್ಕೂ ಲಾಬಿ, ಹಣದ ವ್ಯವಹಾರ ನಡೆಯುತ್ತದೆ ಎಂಬ ದೂರುಗಳು ಕೇಳಿಬರುತ್ತಿವೆ. ಇದರಿಂದ ನಿಜವಾಗಿ ಉತ್ತಮ ಸಾಧನೆ ಮಾಡಿದ ವಿದ್ಯಾರ್ಥಿಗೆ ಅನ್ಯಾಯ ಮಾಡಿದಂತಾಗುತ್ತದೆ. ಪರೀಕ್ಷೆಗಳಲ್ಲಿ ಅಂಕ ಗಳಿಕೆಯೇ ಮಾನದಂಡ ಎಂದು ಪರಿಗಣಿಸಿದರೂ ನ್ಯಾಯವಾಗಿ ಸಲ್ಲಬೇಕಾದ ಪ್ರಾಮಾಣಿಕ ವಿದ್ಯಾರ್ಥಿಗೆ ರ್‍ಯಾಂಕ್ ಆಗಲೀ, ಚಿನ್ನದ ಪದಕವಾಗಲೀ ಸಿಗುತ್ತಿಲ್ಲ ಎಂಬುದಕ್ಕೆ ಉದಾಹರಣೆಗಳಿವೆ. ಹೀಗಾಗದಂತೆ ಕಾಲೇಜು ಉಪನ್ಯಾಸಕರು, ತೀರ್ಪುಗಾರರು ನೋಡಿಕೊಳ್ಳಬೇಕಾದ ಅನಿವಾರ್ಯತೆ ಇದೆ.



ಗಂಗೂಬಾಯಿ ಹಾನಗಲ್ ಅವರಿಗೆ ಸಾಥಿ